# ಕಲಿಕಾಫಲ – 6

ಗ್ರಹಿಕೆಯೊಂದಿಗೆ ಪಠ್ಯ-ಪಠ್ಯೇತರ ವಿಷಯಗಳನ್ನು ಓದಿ ಮತ್ತು ಓದುವಾಗ ಅದರ ವಿವರಗಳು ಪಾತ್ರಗಳು ಮುಖ್ಯ ಪರಿಕಲ್ಪನೆ ಮತ್ತು ಆಲೋಚನೆ ಹಾಗೂ ಘಟನೆಯ ಅನುಕ್ರಮಗಳನ್ನು ಗುರುತಿಸುವರು.

## ಚಟುವಟಿಕೆ 1: ನನ್ನ ಅನುಭವ ನನ್ನದೇ ಬರಹ

ಅ. ಈ ಪದ್ಯದ ಆಯ್ದ ಭಾಗವನ್ನು ಓದಿ ಅರ್ಥೈಸಿಕೊಂಡು, ನೀಡಲಾದ ಪ್ರಶ್ನೆಗಳನ್ನು ಕುರಿತು ಆಲೋಚಿಸಿ.

### ಕಲಿಕಾ ಹಬ್ಬ

– ಡಾ. ನಿಂಗು ಸೊಲಗಿ

ಹಬ್ಬ ಹಬ್ಬ ಹಬ್ಬ
ಸಂತಸ ಕಲಿಕೆಯ ಹಬ್ಬ
ಭಾವದ ಬೆಳಕಿಗೆ ಕಲ್ಪನೆ ಕನಸಿಗೆ
ರೆಕ್ಕೆಯ ಕಟ್ಟುವ ಹಬ್ಬ

ಆಡುತ ಹಾಡುತ ಕುಣಿಯುತ ನಲಿಯುತ
ಕಲಿಯುವ ನಲಿ-ಕಲಿ ಹಬ್ಬ
ಯೋಚಿಸಿ ಯೋಜಿಸಿ ಪ್ರಶ್ನಿಸಿ ಪ್ರಯೋಗಿಸಿ
ತಿಳಿಯುವ ಸಂಭ್ರಮದ ಹಬ್ಬ

ಕತೆಯನ್ನು ಕಟ್ಟಿ ಕವಿತೆಯ ಬರೆದು
ಕುಶಲತೆ ಮೆರೆಯುವ ಹಬ್ಬ
ಜನರೊಡಗೂಡಿ ಜನಪದವರಿತು
ಜನಮನ ಗೂಡಿಸೋ ಹಬ್ಬ

1. 'ಕಲಿಕಾ ಹಬ್ಬ' ಕಾರ್ಯಕ್ರಮದಲ್ಲಿ ನೀವು ಏನೆಲ್ಲಾ ವಿಷಯಗಳನ್ನು ಅರ್ಥಮಾಡಿಕೊಂಡಿರುವಿರಿ?
2. 'ಕಲಿಕಾ ಹಬ್ಬ' ಕಾರ್ಯಕ್ರಮವು ಹೇಗೆ ಜರುಗಿತು? ಅದರಲ್ಲಿ ಭಾಗವಹಿಸಿದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ?
3. ನಿಮ್ಮ ದೃಷ್ಟಿಯಲ್ಲಿ 'ಕಲಿಕಾ ಹಬ್ಬ' ಹೇಗಿರಬೇಕು ವಿವರಿಸಿ?
4. ನೀವು ಇಷ್ಟ ಪಡುವ ಹಬ್ಬದ ಬಗ್ಗೆ ಪದ್ಯರೂಪದಲ್ಲಿ ಬರೆದು ಓದಿ.

ಮಾಡು ಆಡು ಚಟುವಟಿಕೆಯಲ್ಲಿ ವಿವಿಧ ಪ್ರಯೋಗಗಳಿಂದ ವಿವಿಧ ವಸ್ತುಗಳನ್ನು ಮಾಡಲು ಕಲಿತೆವು. ಕಾಗದ ಕತ್ತರಿ ಚಟುವಟಿಕೆಯಲ್ಲಿ ವಿವಿಧ ಮನೋರಂಜನ ವಸ್ತುಗಳನ್ನು ಮಾಡಿ ಖುಷಿ ಪಟ್ಟೆವು. ಊರು ಸುತ್ತೋಣ ಚಟುವಟಿಕೆಯಲ್ಲಿ ಊರಿನಲ್ಲಿರುವ ವಿವಿಧ ಸ್ಥಳಗಳಿಗೆ ಭೇಟಿಕೊಟ್ಟು ಅಲ್ಲಿನ ಜನರಿಗೆ ಪ್ರಶ್ನೆ ಕೇಳಿ ಉತ್ತರ ಪಡೆದೆವು. ಅಕ್ಷರ ದಾಟ ಚಟುವಟಿಕೆಯಲ್ಲಿ ಭಾಷೆಯ ಬಗ್ಗೆ ಹಾಡುಗಳನ್ನು ಕಲಿತೆವು.

ಕಲಿಕಾ ಹಬ್ಬವು ಮೊದಲು ಮೆರವಣಿಗೆಯಿಂದ ಊರಿನಲ್ಲಿ ಮೆರವಣಿಗೆಯೊಂದಿಗೆ ಶಾಲೆಗೆ ಬಂದು ಶುರುವಾಯಿತು. ಉದ್ಘಾಟನೆ ಆದ ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಅವರವರ ಕೊಠಡಿಗಳಲ್ಲಿ ಚಟುವಟಿಕೆಗಳ ಮೂಲಕ ಕಲಿಸಲಾಯಿತು ಬಹಳ ಸಂತಸದಿಂದ ಜರುಗಿತು ನನ್ನ ದೃಷ್ಟಿಯಲ್ಲಿ ಕಲಿಕಾ ಹಬ್ಬ ಇದೇ ರೀತಿ ಜರುಗಬೇಕು ಬಹಳ ಚೆನ್ನಾಗಿ ಆಯೋಜಿಸಿದ್ದರು ಇದೇ ರೀತಿ ಪ್ರತಿವರ್ಷ ರಜೆಯಲ್ಲಿ ಏಪ್ರಿಲ್ ಮೇ ರಜೆಯಲ್ಲಿ ಮಾಡಿದರೆ ಬಹಳ ಒಳ್ಳೆಯದು ಅಥವಾ ಜೂನ್ ಮೊದಲನೇ ವಾರ ಮಾಡಿದರೆ ಬಹಳ ಒಳ್ಳೆಯದು.

ನಾನು ಇಷ್ಟಪಡುವ ಹಬ್ಬ ರಂಜಾನ್ ಹಬ್ಬ
ಹಬ್ಬ ಹಬ್ಬ ರಂಜಾನ್ ಹಬ್ಬ
ಹಬ್ಬ ಹಬ್ಬ ಉಪವಾಸದ ಹಬ್ಬ
ಹಬ್ಬ ಹಬ್ಬ ಬೆಳಗ್ಗೆ ಬೇಗ ಏಳುವ ಹಬ್ಬ
ಹಬ್ಬ ಹಬ್ಬ ಬೆಳಗ್ಗೆ ಕತ್ತಲಲ್ಲಿ ಊಟ ಮಾಡುವ ಹಬ್ಬ
ಹಬ್ಬ ಹಬ್ಬ ಸೂರ್ಯ ಮುಳುಗಿದ ಮೇಲೆ ಊಟ ಮಾಡುವ ಹಬ್ಬ
ಹಬ್ಬ ಹಬ್ಬ ತಿಂಗಳು ಪೂರ್ತಿ ನಡೆಯುವ ಹಬ್ಬ
ಹಬ್ಬ ಹಬ್ಬ ವಿವಿಧ ಹಣ್ಣುಗಳು ಸೇವಿಸುವ ಹಬ್ಬ
ಹಬ್ಬ ಹಬ್ಬ ತಿಂಗಳು ಉಪವಾಸದ ಹಬ್ಬ

ಪ್ರಶ್ನೆಗಳಿಗೆ ಉತ್ತರಿಸಿ.

ಒಬ್ಬ ರೈತನಿದ್ದ ಅವನಿಗೆ ಬಹಳ ಆತುರ, ಬೀಜ ಬಿತ್ತಿದ ಮರು ದಿನವೇ ಅದು ಮೊಳಕೆ ಒಡೆಯಬೇಕು, ನಂತರ ಒಂದೇ ವಾರದಲ್ಲಿ ಅದು ಬೆಳೆದು ನಿಲ್ಲಬೇಕು ಎಂಬುದು ಅವನ ಬಯಕೆಯಾಗಿತ್ತು. ಹಗಲು ರಾತ್ರಿ ಇದರ ಬಗ್ಗೆಯೇ ಯೋಚಿಸುತ್ತಿದ್ದ ಆದರೆ ಅವನು ಬಿತ್ತಿದ ಬೀಜ ಮಾತ್ರ ನಿಧಾನವಾಗಿ ಮೊಳಕೆಯೊಡೆದು ನಿಧಾನವಾಗಿ ಬೆಳೆಯುತ್ತಿತ್ತು. ಒಂದು ದಿನ ಅವನಿಗೊಂದು ಉಪಾಯ ಹೊಳೆಯಿತು. ಬೆಳೆದ ಸಸಿಗಳನ್ನು ಮೇಲಕ್ಕೆಳೆದು ನಿಲ್ಲಿಸಿದರೆ ಬಹುಬೇಗ ಬೆಳೆಯುತ್ತದೆ ಎಂದು ಯೋಚಿಸಿದ. ಅವತ್ತೇ ಗದ್ದೆಗೆ ಹೋಗಿ ಎಲ್ಲಾ ಸಸಿಗಳನ್ನು ಜುಟ್ಟು ಹಿಡಿದು ಮೇಲಕ್ಕೆಳೆದು ನಿಲ್ಲಿಸಿದ. ಸಂಜೆ ವೇಳೆ ಅವನಿಗೆ ಸುಸ್ತಾಯಿತು. ಆದರೂ ಎಲ್ಲಾ ಸಸಿಗಳು ಎತ್ತರವಾಗಿದ್ದನ್ನು ನೋಡಿ ಸಂತೋಷಗೊಂಡು ಮನೆಗೆ ಮರಳಿದ.

ಮರುದಿನ ______________________

ಮರುದಿನ ಹೊಲಕ್ಕೆ ಹೋಗಿ ನೋಡಿದಾಗ ಸಸಿಗಳೆಲ್ಲವೂ ಮುದುರಿ ಹೋಗಿದ್ದವು ಏಕೆಂದರೆ ಗಮನಿಸಿದ ಅವನು ಅದು ಅವುಗಳ ಜುಟ್ಟನ್ನು ಹಿಡಿದು ಎಳೆದಾಗ ಅವುಗಳ ಬೇರುಗಳು ಸಮೇತ ಅವು ಮೇಲಕ್ಕೆ ಬಂದಿದ್ದವು ಹಾಗಾಗಿ ಅವು ಎರಡು ಮೂರು ದಿನಗಳಲ್ಲಿ ಎಲ್ಲವೂ ಒಣಗಿಹೋದವು ಇದರಿಂದ ರೈತ ಬಹಳ ಬೇಸರ ಪಟ್ಟ ಮತ್ತು ತನ್ನ ಅಜ್ಞಾನಕ್ಕೆ ಅವನು ಮರುಕ ಪಟ್ಟ ಮತ್ತು ತನ್ನ ತಿಳುವಳಿಕೆ ಇಲ್ಲದ ಕೆಲಸಕ್ಕೆ ಅವನು ಪಶ್ಚಾತಾಪ ಪಟ್ಟ ಮತ್ತು ಮುಂದೆ ಈ ರೀತಿ ಮಾಡಲು ಮಾಡದಿರಲು ನಿರ್ಧರಿಸಿದ ಮತ್ತು ಅವಸರವೇ ಅಪಾಯ ಎನ್ನುವ ಮಾತನ್ನು ಕಲಿತ ಮತ್ತು ತಾಳ್ಮೆಯಿಂದ ಕಾಯಬೇಕು ಎನ್ನುವುದನ್ನು ಕೂಡ ಅರಿತ ರೈತ ಮತ್ತೆ ಹೊಲದಲ್ಲಿ ಸಸಿಗಳನ್ನು ನೆಟ್ಟ ಅವು ಬರುವವರೆಗೂ ಕಾದ ಸಸಿಗಳು ಬೆಳೆದು ಬೆಳೆ ಬಂದಿತು ಬೆಳೆಯನ್ನು ಕೊಯ್ದು ಮಾರುಕಟ್ಟೆಗೆ ಹಾಕಿ ಬೆಳೆ ಮಾರಿ ಹಣ ಬಂತು ಹಣದಿಂದ ಅವನು ಶ್ರೀಮಂತನಾದ ಈ ರೀತಿ ರೈತನು ಅವಸರದಿಂದ ಏನು ಸಾಧಿಸಲು ಆಗುವುದಿಲ್ಲ ತಾಳ್ಮೆಯಿಂದ ಮುಂದುವರಿಯಬೇಕು ಎನ್ನುವುದನ್ನು ಕಲಿತ.

ಅ. ಕೊಟ್ಟಿರುವ ಕಥೆಗೆ ಯಾವ ಗಾದೆ ಸೂಕ್ತವೆನಿಸುತ್ತದೆ ಗುರುತು ಹಾಕಿ.

ಅ. ಕೈ ಕೆಸರಾದರೆ ಬಾಯಿ ಮೊಸರು

ಆ. ಆತುರಗಾರನಿಗೆ ಬುದ್ಧಿ ಮಟ್ಟ

ಇ. ಗಿಡ ಜಗ್ಗಿದರೆ ಬೆಳೆ ಬಂದಿತೇ

ಈ. ಬೆಳೆಯುವ ಸಿರಿ ಮೊಳಕೆಯಲ್ಲಿ

ಆ. ಪೂರ್ಣಗೊಳಿಸಿದ ಕತೆಗೆ ಸರಿಹೊಂದುವ ಒಂದು ಶೀರ್ಷಿಕೆ ನೀಡಿರಿ?

ಆತುರಗಾರ ರೈತ ಕಲಿತ ಪಾಠ

ಇ. ತಾಳ್ಮೆ' ಎಂಬುದು ಜೀವನದಲ್ಲಿ ಅತಿ ಮುಖ್ಯ ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ?

ತಾಳ್ಮೆ ಇಲ್ಲದವ ಏನನ್ನು ಸಾಧಿಸಲಾರ ಪ್ರತಿಯೊಂದು ಸಾಧನೆಯನ್ನು ಸಾಧಿಸಲು ಸಮಯ ಬೇಕು ಒಂದು ಕೋಳಿ ಮೊಟ್ಟೆ ಇಡಲು ಪೂರ್ತಿ ಒಂದು ದಿವಸ ಕಾಯಬೇಕು ಇನ್ನೊಂದು ಮೊಟ್ಟೆ ತಯಾರಾಗಲು ಇನ್ನೊಂದು ದಿವಸ ಕಾಯಬೇಕು ಹೀಗೆ ಪ್ರತಿಯೊಂದುವಸ್ತು ಅಥವಾ ಪ್ರತಿಯೊಂದು ಕೆಲಸ ಮುಗಿಯಲು ಅದರದ್ದೇ ಆದ ಸಮಯವಿದೆ ಆ ಸಮಯಕ್ಕಾಗಿ ನಾವು ತಾಳ್ಮೆ ಬೆಳೆಸಿಕೊಳ್ಳಬೇಕು.

ಈ. ರೈತನ ಆಲೋಚನೆ ಸರಿ ಇದೆಯೇ? ಏಕೆ?

ರೈತನ ಆಲೋಚನೆ ಬಹಳ ತಪ್ಪು ಅವನ ಆಲೋಚನೆ ಬೆಳೆ ಬೆಳೆಯುವುದು ಸರಿಯಾಗಿದೆ ಆದರೆ ಬಹಳ ಬೇಗ ಬೆಳೆ ತೆಗೆದುಕೊಳ್ಳಬೇಕು ಎನ್ನುವ ಆಸೆ ತಪ್ಪಾಗಿದೆ ಹಾಗಾಗಿ ಬೆಳೆ ಬೆಳೆಯಲು ಬೇಕಾಗುವ ಸಮಯದ ಜೊತೆಗೆ ಬೆಳೆ ಬೆಳೆಯುವ ಆಲೋಚನೆ ಬಹಳ ಒಳ್ಳೆಯದು ಸಮಯವನ್ನು ಬಿಟ್ಟು ಅವನು ಆತುರ ಪಟ್ಟಿರುವುದು ಬಹಳ ತಪ್ಪು.

ಉ. ಕಥೆಯಲ್ಲಿ ಬರುವ ಒತ್ತಕ್ಷರದ ಪದಗಳನ್ನು ಗುರುತಿಸಿ.

ಒಬ್ಬ ರೈತನಿದ್ದ ಬಿಟ್ಟಿದ ನಿಲ್ಲಬೇಕು ವಾರದಲ್ಲಿ ಬಯಕೆಯಾಗಿತ್ತು ರಾತ್ರಿ ಬಗ್ಗೆಯೇ ಯೋಚಿಸುತ್ತಿದ್ದ ಮಾತ್ರ ಬೆಳೆಯುತ್ತಿತ್ತು ಮೇಲಕ್ಕೆಳೆದು ಬೆಳೆಯುತ್ತದೆ ಅವತ್ತೇ ಗದ್ದೆಗೆ ಎಲ್ಲಾ ಸಸಿಗಳನ್ನು ಜುಟ್ಟು ಮೇಲಕ್ಕೆಳೆದು ಸುಸ್ತಾಯಿತು ಎಲ್ಲಾ ಎತ್ತರವಾಗಿದ್ದನ್ನು

## ಚಟುವಟಿಕೆ 3: ನನ್ನ ಹೆಜ್ಜೆ ಗ್ರಂಥಾಲಯದೆಡೆಗೆ

ಅ. ನಿಮಗೆ ನೀಡಿರುವ ಗ್ರಂಥಾಲಯದ ಪುಸ್ತಕವನ್ನು ಓದಿ, ಕೇಳಲಾದ ಮಾಹಿತಿಗಳನ್ನು ಪೂರ್ಣಗೊಳಿಸಿ. (ನಿಮಗೆ ಅಗತ್ಯವಿದ್ದರೆ ಶಿಕ್ಷಕರ ನೆರವನ್ನು ಪಡೆ... ಪಡೆದುಕೊಳ್ಳಿ)

1. ಪುಸ್ತಕದ ಹೆಸರು: ರಾಜಕುಮಾರಿ ಹಾಗೂ ಬಿಳಿ ಕುದುರೆ

2. ಲೇಖಕರ ಹೆಸರು: — ಮಂಜುಕನ್ನಿಕಾ

...ಕ್ಕಳ ಮೇಲಿನ ಪ್ರೀತಿಗಾಗಿ ಮಕ್ಕಳ ಕಥೆಗಳನ್ನು ಬರೆದಿದ್ದಾರೆ ತಂದೆ ತಾಯಂದಿರು ಮಕ್ಕಳಿಗೆ ಹೇಳುವ ಕಥೆಗಳೇ ಈ ಕಥೆಗಳಲ್ಲಿವೆ ಈ ...ಥೆಗಳಲ್ಲಿ ಮಕ್ಕಳಿಗೆ ಮನೋರಂಜನೆ ಕೊಡುವುದೇ ಇದರ ಉದ್ದೇಶ.

4. ಈ ಪುಸ್ತಕವನ್ನು ... ಗೆಳೆಯ ಗೆಳತಿಯರು ಕೂಡ ಈ ಕಥೆಗಳನ್ನು ಓದಿ ಸಂತೋಷಪಡಲು ಪ್ರೋತ್ಸಾಹಿಸುವೆ.

5. ಈ ಪುಸ್ತಕದಲ್ಲಿ ನಿಮ್ಮ ...

ಯುವರಾಣಿ ಹೆದರಬೇಡಾ, ನಾನು ಯಾವತ್ತೂ ನಿನ್ನೊಂದಿಗೆ ಇರಬೇಕೆಂದು ಬಯಸಿದ್ದೆ, ಆದರೆ ಆ ಭಾಗ್ಯ ನನಗಿಲ್ಲ, ದೇವರು ನಿನಗೆ ಒಳ್ಳೆಯದನ್ನು ಮಾಡಲಿ, ನಾನು ಹೋಗುತ್ತಿದ್ದೇನೆ, ಆತನ ಕಣ್ಣುಗಳ ತುಂಬಾ ದೊಡ್ಡ ದೊಡ್ಡ ಕಂಬನಿಗಳು ಮೂಡಿದ್ದನ್ನು ಕಂಡು ನೋವಾಗಿತ್ತು ರಾಜಕುಮಾರಿಗೆ

6. ಪುಸ್ತಕ ಕುರಿತು ನಿಮ್ಮ ಅಭಿಪ್ರಾಯ.

ನನಗೆ ಕಥೆಗಳು ಎಂದರೆ ಬಹಳ ಇಷ್ಟ. ಕಥೆಗಳಲ್ಲಿ ರಾಜಕುಮಾರನ ಕಥೆ ಅಂದರೆ ತುಂಬಾ ಇಷ್ಟ.
ಈ ಪುಸ್ತಕ ಮಕ್ಕಳು ಬದಲು ಬಹಳ ಚೆನ್ನಾಗಿದೆ ಇದರಲ್ಲಿರುವ ಕಥೆಗಳು ಬಹಳ ಮನೋರಂಜನೆ ಕೊಡುತ್ತವೆ ನಾನು ಚಿಕ್ಕ ಹುಡುಗಿ ನನಗೆ ಅಮ್ಮ ಕೂಡ ಇಂಥದೇ ಕಥೆಗಳನ್ನು ಹೇಳುತ್ತಾರೆ ರಾಜಕುಮಾರಿಗಾಗಿ ರಾಜಕುಮಾರ ಬಿಳಿ ಕುದುರೆ ದೇಶ ಸಂಚಾರ ಮಾಡುವುದು ಕಲ್ಪನೆಗಳ ಬೆಳ್ಳಿ ಮೋಡಗಳ ಮೇಲೆ ನನ್ನನ್ನು ಈಜಾಡಿಸುತ್ತವೆ .

## ಚಟುವಟಿಕೆ 4: ಅದಲು ಬದಲು ಸರಿಪಡಿಸೋಣ.

1. **ನೀಡಲಾದ ಕಥೆಯ ವಾಕ್ಯಗಳು ಅದಲು ಬದಲಾಗಿವೆ. ಅವುಗಳನ್ನು ಸರಿಪಡಿಸಿ ಮತ್ತು ಕ್ರಮಬದ್ಧವಾಗಿ ಬರೆದು ಸಂಪೂರ್ಣ ಕಥೆ ರಚಿಸಿ.**

| |
|---|
| ಎರಡನೆಯ ಕುರುಡನು ಆನೆಯ ಬಾಲವನ್ನು ಹಿಡಿದು 'ಆನೆಯು ಈಟಿಯ ಹಾಗಿದೆ' ಎಂದನು. |
| ಆನೆಯ ಬಳಿಗೆ ಹೋದರು. |
| ಐದನೆಯವನು ಆನೆಯ ಕಿವಿಯನ್ನು ಮುಟ್ಟಿ 'ಆನೆಯು ಬೀಸಣಿಗೆಯಂತಿದೆ' ಎಂದನು. |
| ಒಂದಾನೊಂದು ಕಾಲದಲ್ಲಿ ಆರು ಮಂದಿ ಕುರುಡರಿದ್ದರು. |
| ಮೊದಲ ಕುರುಡನು ವಿಶಾಲವಾದ ಆನೆಯ ಮೈ ಮೇಲೆ ಬಿದ್ದು 'ಆನೆಯು ಬಲವಾದ ಗೋಡೆಯಂತಿದೆ' ಎಂದನು. |
| ನಾಲ್ಕನೇ ಕುರುಡನು ಆನೆಯ ಕಾಲನ್ನು ಸ್ಪರ್ಶಿಸುತ್ತಾ, 'ಆನೆಯು ಮರದ ಕಾಂಡದಂತಿದೆ' ಎಂದನು. |

| |
|---|
| ಆ ಕುರುಡರು ಆನೆಯನ್ನು ಎಂದೂ ನೋಡಿರಲಿಲ್ಲ. ಅವರೆಲ್ಲರೂ ಆನೆಯನ್ನು ನೋಡಬೇಕೆಂದು ಆರನೇ ಕುರುಡನು ಆನೆಯ ಬಾಲವನ್ನು ಹಿಡಿದು 'ಆನೆಯು ಹಗ್ಗದಂತಿದೆ' ಎಂದನು. |
| ಪ್ರತಿಯೊಬ್ಬರೂ ತಾವು ಹೇಳಿದ್ದೆ ಸರಿ ಎಂದರು. ಆರು ಕುರುಡರು ಈ ರೀತಿ ಪುನಃ ಪುನಃ ವಾದ ಮಾಡಿದರು. ನೋಡಿದರೆ ಎಲ್ಲರದೂ ತಪ್ಪು. |
| ಮೂರನೇ ಕುರುಡ ಆನೆಯ ಸೊಂಡಿಲನ್ನು ಹಿಡಿದು 'ಆನೆ ಹಾವಿನಂತಿದೆ' ಎಂದು ಕೊಂಡನು. |

ಒಂದಾನೊಂದು ಕಾಲದಲ್ಲಿ ಆರು ಮಂದಿ ಕುರುಡರಿದ್ದರು.
ಆ ಕುರುಡರು ಆನೆಯನ್ನು ಎಂದೂ ನೋಡಿರಲಿಲ್ಲ ಅವರೆಲ್ಲರೂ ಆನೆಯನ್ನು ನೋಡಬೇಕೆಂದು ಆನೆಯ ಬಳಿ ಗೆ ಹೋದರು.
ಮೊದಲ ಕುರುಡನು ವಿಶಾಲವಾದ ಆನೆಯ ಮೈಮೇಲೆ ಬಿದ್ದು ಆನೆಯೂ ಬಲವಾದ ಗೋಡೆಯಂತಿದೆ ಎಂದನು.
ಎರಡನೆಯ ಕುರುಡನು ಆನೆಯ ಬಾಲವನ್ನು ಹಿಡಿದು ಆನೆಯೂ ಈಟಿಯ ಹಾಗಿದೆ ಎಂದನು.
ಮೂರನೇ ಕುರುಡ ಆನೆಯ ಸೊಂಡಿಲನ್ನು ಹಿಡಿದು ಆನೆ ಹಾವಿನಂತಿದೆ ಎಂದುಕೊಂಡನು
ನಾಲ್ಕನೇ ಕುರುಡನು ಆನೆಯ ಕಾಲನ್ನು ಸ್ಪರ್ಶಿಸುತ್ತಾ ಆನೆಯು ಮರದ ಕಾಂಡದಂತಿದೆ ಎಂದನು.
ಐದನೆಯವನು ಆನೆಯ ಕಿವಿಯನ್ನು ಮುಟ್ಟಿ ಆನೆಯೂ ಬೀಸಣಿಗೆಯಂತಿದೆ ಎಂದನು.
ಆರನೇ ಕುರುಡನು ಆನೆಯ ಬಾಲವನ್ನು ಹಿಡಿದು ಆನೆಯೂ ಹಗ್ಗದಂತಿದೆ ಎಂದನು.
ಪ್ರತಿಯೊಬ್ಬರೂ ತಾವು ಹೇಳಿದ್ದೆ ಸರಿ ಎಂದರು. ಆರು ಕುರುಡರು ಈ ರೀತಿ ಪುನಹ ಪುನಹ ವಾದ ಮಾಡಿದರು ನೋಡಿದರೆ ಎಲ್ಲರದು ತಪ್ಪು.

## ಚಟುವಟಿಕೆ 5: ಕೇಳ್ರಪ್ಪ ಕೇಳಿ ಒಂದು ಸುದ್ದಿ

ಅ. ಪ್ರಕಟಣೆಯನ್ನು ಓದಿ ಅರ್ಥೈಸಿಕೊಂಡು, ನೀವು ತಿಳಿದುಕೊಂಡ ಅಂಶಗಳನ್ನು ಪತ್ಯೇಕ ವಾಕ್ಯಗಳಾಗಿ ಪಟ್ಟಿ ಮಾಡಿರಿ.

### ಪ್ರಕಟಣೆ

### ಜಿಲ್ಲಾಡಳಿತ

ಜಿಲ್ಲಾದ್ಯಂತ ಹರಡುತ್ತಿರುವ ಮಲೇರಿಯ ರೋಗವನ್ನು ತಡೆಗಟ್ಟಲು ಮನೆಯ ಸುತ್ತಮುತ್ತಲಿನ ವಾತಾವರಣವನ್ನು ಶುಚಿಯಾಗಿಟ್ಟುಕೊಳ್ಳಲು ಕ್ರಮವಹಿಸುವುದು ಕಡ್ಡಾಯ. ಸಾರ್ವಜನಿಕರು ತಮ್ಮ ಮನೆಯ ಹಾಗೂ ಅಕ್ಕಪಕ್ಕದ ಮನೆಯ ಮುಂದಿನ ಚರಂಡಿಗಳಲ್ಲಿ ನೀರು ನಿಲ್ಲದಂತೆ ಜಾಗ್ರತೆವಹಿಸಬೇಕು. ಆದ್ದರಿಂದ ತಮ್ಮ ಗ್ರಾಮಗಳಲ್ಲಿ ಸ್ವಚ್ಛವಾಗಿ ಇಟ್ಟುಕೊಳ್ಳಲು, ಮಲೇರಿಯಾ ರೋಗ ಬರದಂತೆ ತಡೆಗಟ್ಟಲು, ಮುನ್ನೆಚ್ಚರಿಕೆ ವಹಿಸಬೇಕು. ಹಾಗೆಯೇ ಜ್ವರದ ಲಕ್ಷಣಗಳು ಕಂಡುಬಂದಲ್ಲಿ, ತಕ್ಷಣ ಚಿಕಿತ್ಸೆ ಪಡೆಯಲು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಹಾಗೂ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಗ್ರಾಮಪಂಚಾಯಿತಿಗೆ ಆದೇಶಿಸಲಾಗಿದೆ.

ಇದು ಜಿಲ್ಲಾಡಳಿತ ಜಿಲ್ಲಾ ಪಂಚಾಯಿತಿಯಿಂದ ಪ್ರಕಟಿಸಿದ ಪ್ರಕಟಣೆಯಾಗಿದೆ.
ಈ ಪ್ರಕಟಣೆ ಮಲೇರಿಯಾ ರೋಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಾಗಿದೆ.
ಮುಖ್ಯವಾಗಿ ಮಲೇರಿಯಾ ರೋಗವು ಸೊಳ್ಳೆಗಳಿಂದ ಹರಡುತ್ತದೆ.
ಆದುದರಿಂದ ಸೊಳ್ಳೆಗಳು ಇರುವ ಜಾಗ ಚರಂಡಿಗಳ ನೀರು ನಿಲ್ಲದಂತೆ ನಾವು ಜಾಗ್ರತೆ ವಹಿಸಬೇಕು.
ನಮ್ಮ ಮನೆಯ ಸುತ್ತಮುತ್ತ ಊರುಗಳ ಸುತ್ತಮುತ್ತ ಎಲ್ಲೂ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸಬೇಕು.
ಮಲೇರಿಯಾ ರೋಗದ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ನಾವು ವೈದ್ಯರನ್ನು ಸಂಪರ್ಕಿಸಬೇಕು.
ಮಲೇರಿಯಾ ರೋಗ ತಡೆಗಟ್ಟಲು ಸಂಪೂರ್ಣ ಸಮುದಾಯ ಜಾಗೃತಿ ವಹಿಸಬೇಕು.

## ಚಟುವಟಿಕೆ 6: ನಾನು ಹೇಳುವೆನು

**ಕೆಳಗಿನ ಗದ್ಯ ಭಾಗವನ್ನು ಓದಿ ಅರ್ಥೈಸಿಕೊಂಡು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಅಕ್ಬರ್, ಬೀರ್‌ಬಲ್, ದೊರೆ ಮಂತ್ರಿಯಾಗಿದ್ದಂತೆ ಆತ್ಮೀಯ ಮಿತ್ರರೂ ಆಗಿದ್ದರು. ಒಮ್ಮೆ ಅಕ್ಬರ್ ಮಹಾಶಯನಿಗೆ ಬೀರಬಲ್ಲನ ಮೇಲೆ ಯಾವುದೋ ಕಾರಣಕ್ಕೆ ಅಸಮಾಧಾನ ಉಂಟಾಯಿತು. "ನಿನ್ನ ಮುಖವನ್ನು ತೋರಿಸಬೇಡ, ಎಲ್ಲಿಗಾದರೂ ಹೊರಟು ಹೋಗು" ಎಂದು ಬೀರಬಲ್‌ಗೆ ಆದೇಶಿಸಿದ. ಅಂದಿನಿಂದ ಬೀರಬಲ್ ಯಾರಿಗೂ ಕಾಣದಂತೆ ಮರೆಯಾದ.

ಕೆಲ ದಿನಗಳ ನಂತರ ಅಕ್ಬರನಿಗೆ ಬೀರಬಲ್ಲನನ್ನು ಕಾಣುವ ತವಕ ಉಂಟಾಯಿತು. ಅವನಿಗಾಗಿ ಹುಡುಕಾಡಿಸಿದ. ಬೀರಬಲ್ ಎಲ್ಲಿಯೂ ಸಿಗಲಿಲ್ಲ. "ಎಂಥ ಕೆಲಸ ಆಗಿಹೋಯಿತು" ಎಂದು ಅಕ್ಬರ್ ಚಿಂತಿಸತೊಡಗಿದ.

ಒಮ್ಮೆ ಅಕ್ಬರ್ ದರ್ಬಾರ್ ನಡೆಸುತ್ತಿರುವಾಗ ಸೇವಕನೊಬ್ಬ ಒಳಗೆ ಬಂದು "ಪ್ರಭು! ಅರಮನೆಯ ದ್ವಾರದಲ್ಲಿ ಒಬ್ಬ ಸಾಧು ಬಂದಿದ್ದಾರೆ. ಅವರ ಶಿಷ್ಯರು ಆ ಸಾಧು ವಿಶ್ವದಲ್ಲಿಯೇ ದೊಡ್ಡ ಮೇಧಾವಿ ಹಾಗು ತುಂಬಾ ಬುದ್ಧಿವಂತರೆಂದು ಹೇಳುತ್ತಿದ್ದಾರೆ" ಎಂದು ಹೇಳಿದ. ಅಕ್ಬರ್ ತಕ್ಷಣವೇ ಆ ಸಾಧುವನ್ನು ಬರಮಾಡಿಕೊಂಡನು.

ಅರಮನೆಯನ್ನು ಪ್ರವೇಶಿಸಿದ ಸಾಧು ತುಂಬಾ ತೇಜಸ್ವಿಯಾಗಿದ್ದ. ಅದೇ ಅವನೊಬ್ಬ ಬುದ್ಧಿವಂತನೆಂಬುದನ್ನು ಸಾರುತ್ತಿತ್ತು.

"ಸಾಧು! ನೀನು ಬಹಳ ಬುದ್ಧಿವಂತನೆಂದು ಕೇಳಿದೆ. ನಿನ್ನನ್ನು ಪರೀಕ್ಷಿಸುವ ಸಲುವಾಗಿ ಆಸ್ಥಾನದ ಪಂಡಿತರು ನಿನಗೆ ಪ್ರಶ್ನೆಗಳನ್ನು ಕೇಳಲು ಹೇಳುತ್ತೇನೆ. ಸರಿಯಾಗಿ ಉತ್ತರಿಸಿದರೆ ಅಮೂಲ್ಯವಾದ ಉಡುಗೊರೆಗಳನ್ನು ನೀಡುತ್ತೇನೆ" ಎಂದನು ಅಕ್ಬರ್. ಆ ಮಾತಿಗೆ ಸಾಧು ಆಗಬಹುದು ಎಂದನು. ಅಕ್ಬರನ ಆಸ್ಥಾನದಲ್ಲಿ ತಾನ್‌ಸೇನ್, ತೋದರಮಲ್ಲ, ಅಬುಲ್ ಫಜಲ್, ಫೈಜಿ ಮೊದಲಾದ ವಿದ್ವಾಂಸರಿದ್ದರು. ಅವರು ಪ್ರಶ್ನಿಸತೊಡಗಿದರು. ಮೊದಲಿಗೆ ......

**ಅಬುಲ್ ಫಜಲ್:** ಕಳೆದು ಹೋದುದ್ದನ್ನು ಮತ್ತೆ ಪಡೆಯಲಾಗದು ಯಾವುದು?

**ಸಾಧು:** ಜೀವ, ಅವಕಾಶ, ಸಮಯ

ತೋದರಮಲ್ಲ: ಜಗತ್ತಿನಲ್ಲಿ ಅತ್ಯುತ್ತಮವಾದ ವಸ್ತು ಯಾವುದು?

**ಸಾಧು:** ಜ್ಞಾನ

(ವಿದ್ವಾಂಸರು ಕೇಳಿದ ಪ್ರಶ್ನೆಗಳಿಗೆ ಸಾಧು ಸರಾಗವಾಗಿ ಉತ್ತರಿಸುತ್ತಿದ್ದ.)

ಮಾನ್ ಸಿಂಗ್: ಒಬ್ಬ ವ್ಯಕ್ತಿಯ ಅತ್ಯುತ್ತಮವಾದ ಸಾಮರ್ಥ್ಯ ಯಾವುದು? ಮಾರುತಕ್ಕಿಂತ ವೇಗವಾದದು ಯಾವುದು? ಅತ್ಯಂತ ಸಿಹಿಯಾದದು ಯಾವುದು? ಎಂದು ಪ್ರಶ್ನೆಗಳ ಸುರಿಮಳೆಗೆರೆದ.

**ಸಾಧು:** ವ್ಯಕ್ತಿಯ ಅತ್ಯುತ್ತಮ ಸಾಮರ್ಥ್ಯ ಆತನ ಧೈರ್ಯ. ಮಾರುತಕ್ಕಿಂತ ವೇಗವಾದದು ಮನುಷ್ಯನ ಕಲ್ಪನೆ. ಅತ್ಯಂತ ಸಿಹಿಯಾದದು ಮಗುವಿನ ನಗು.

**ತಾನ್‌ಸೇನ್:** ಸಂಗೀತದಲ್ಲಿ ಅವಿನಾಶಿ ಯಾವುದು?

**ಸಾಧು:** ಸ್ವರಗಳು.

ವಿದ್ವಾಂಸರೆಲ್ಲರು ಸಾಧುವಿನ ಬುದ್ಧಿವಂತಿಕೆಯನ್ನು ಮೆಚ್ಚಿಕೊಂಡರು. ಅನಂತರ ಅಕ್ಬರನೇ ಪ್ರಶ್ನಿಸತೊಡಗಿದನು.

**ಅಕ್ಬರ್:** ರಾಜ್ಯಭಾರ ನಡೆಸುವಲ್ಲಿ ನೆರವಾಗುವ ಅತ್ಯಂತ ಮುಖ್ಯವಾದ ಅಂಶ ಯಾವುದು?

**ಸಾಧು:** ಕೌಶಲ.

**ಅಕ್ಬರ್:** ರಾಜನ ದೊಡ್ಡ ಶತ್ರು ಯಾರು?

**ಸಾಧು:** ಸ್ವಾರ್ಥ.

ಅಕ್ಬರ್ ಚಕ್ರವರ್ತಿ ಸಾಧುವಿನ ಉತ್ತರದಿಂದ ಸಂತಸಪಟ್ಟ, ಅವನಿಗೆ ತನ್ನ ಆಸ್ಥಾನದಲ್ಲಿ ಒಂದು ಸ್ಥಾನವನ್ನು ಕೊಡುವುದಾಗಿ ಹೇಳಿದ. ನಂತರ "ಅಯ್ಯಾ! ಸಾಧುಗಳಿಗೆ ವಿಶೇಷ ಶಕ್ತಿಗಳಿರುತ್ತವೆ ಎಂದು ಕೇಳಿದ್ದೇನೆ. ನಿನಗೆ ಅಂಥ ಯಾವುದಾದರೂ ಶಕ್ತಿ ಇದೆಯೇ?" ಎಂದು ಅಕ್ಬರ್ ಕೇಳಿದನು. ಆಗ ಸಾಧು "ಹೌದು! ತಾವು ಯಾರನ್ನಾದರೂ ನೋಡುವ ಇಚ್ಛೆ ಇದ್ದರೆ ಅವರನ್ನು ನಿಮ್ಮ ಕಣ್ಮುಂದೆ ಕ್ಷಣ ಮಾತ್ರದಲ್ಲಿ ತಂದು ನಿಲ್ಲಿಸಬಲ್ಲೆ" ಎಂದನು. ಹಾಗಿದ್ದರೆ ನನ್ನ ಮಂತ್ರಿ ಬೀರಬಲ್ ಕಾಣೆಯಾಗಿದ್ದಾನೆ. ಅವನನ್ನು ಕರೆದು ತಾ ನೋಡೋಣ ಎಂದ ಅಕ್ಬರ್.

ಸಾಧು ನಿಧಾನವಾಗಿ ತನ್ನ ಗಡ್ಡ, ಮೀಸೆಗಳನ್ನು ಕಳಚಿದ. ಎದುರಿಗೆ ಬೀರಬಲ್ ನಿಂತಿದ್ದ. ಸಾಧುವಿನ ವೇಷದಲ್ಲಿ ಬಂದಿದ್ದವನು ಅವನೇ. ಅಕ್ಬರನಿಗೆ ಸಂತೋಷವಾಯಿತು. "ನಿನ್ನ ಉತ್ತರಗಳಿಂದಲೇ ನಿನ್ನನ್ನು ಬೀರಬಲ್ ಎಂದು ಗುರುತಿಸಿದ್ದೆ. ಅದಕ್ಕೆ ಈ ಪ್ರಶ್ನೆ ಹಾಕಿದೆ. ಇನ್ನೆಂದೂ ನನ್ನ ಬಿಟ್ಟು ಹೋಗಬೇಡ" ಎಂದು ಮಿತ್ರನನ್ನು ಆತ್ಮೀಯತೆಯಿಂದ ಅಪ್ಪಿಕೊಂಡನು.

1. **ಕೆಳಗಿನ ಪದಗಳನ್ನು ನೀವು ಅರ್ಥೈಸಿಕೊಂಡಂತೆ ಎರಡು ಮೂರು ವಾಕ್ಯಗಳಲ್ಲಿ ಅದರ ವಿವರಣೆಯನ್ನು ಬರೆಯಿರಿ.**

◆ ಗೆಳೆತನ

ಗೆಳೆತನ ಎಂದರೆ ಇಬ್ಬರ ನಡುವೆ ಇರುವ ಪ್ರೀತಿ ಸ್ನೇಹ ವಿಶ್ವಾಸ ಇಬ್ಬರು ಕೂಡ ಪ್ರತಿದಿನ ಒಂದೆಡೆಗೆ ಸೇರಿ ಅಥವಾ ಸಮೂಹ ಮಾಧ್ಯಮದ ಮೂಲಕ ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಮತ್ತು ಒಬ್ಬರಿಗೊಬ್ಬರು ಸಲಹೆ ಸೂಚನೆಗಳನ್ನು ಕೊಡುತ್ತಾರೆ ಖುಷಿ ಪಡುತ್ತಾರೆ.

◆ ರಾಜರ ಆಡಳಿತ

ರಾಜರ ಆಡಳಿತ ಬಹಳ ಮುಖ್ಯವಾದದ್ದು. ರಾಜನು ಜನರಿಗೆ ಸ್ಥಿರವಾದ ಆಡಳಿತವನ್ನು ಒದಗಿಸಿದಲ್ಲಿ ಜನರು ಸುಖ ಸಂತೋಷ ಸಮೃದ್ಧಿಯಿಂದ ಬಾಳುತ್ತಾರೆ ಅವನು ಕಂದಾಯಗಳನ್ನು ವಸೂಲಿ ಮಾಡಿ ಸೈನ್ಯವನ್ನು ನೋಡಿಕೊಳ್ಳತಕ್ಕದ್ದು ಜೊತೆಗೆ ಜನ ಪರ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜಿಸ ತಕ್ಕದ್ದು.

◆ ಹಾಸ

ಹಾಸ್ಯ ಜೀವನದಲ್ಲಿ ಸಂತೋಷವಾಗಿರಬೇಕು ಸಂತೋಷವಾಗಿರಲು ನಗಬೇಕು ನಗಲು ಅಲ್ಪಸ್ವಲ್ಪ ಹಾಸ್ಯವಿರಬೇಕು ಹಾಸ್ಯವೆಂದರೆ ಮಾತಿನಲ್ಲೇ ನಾವು ಹೇಳುತ್ತಾ ಕೇಳುತ್ತಾ ನಗುವ ಅಂಶ ನಗುವ ಅಂಶ ಇಲ್ಲದಿದ್ದರೆ ಅದು ಚೆನ್ನಾಗಿರುವುದಿಲ್ಲ ಊಟದಲ್ಲಿ ಬೇರೆ ಬೇರೆ ಅಂಶಗಳು ಹೇಗೆ ಇರುತ್ತವೆಯೋ ನಮ್ಮ ಜೀವನದಲ್ಲಿ ಹಾಸ್ಯ ಇರಬೇಕು.

2. ಈ ನಾಟಕದಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು ಏಕೆ?

ಈ ನಾಟಕದಲ್ಲಿ ನಮಗೆ ಇಷ್ಟವಾದ ಪಾತ್ರ ಅಕ್ಬರ್ ಅವರು ಎಲ್ಲಾ ಮಂತ್ರಿಗಳನ್ನು ಮತ್ತು ಹೆಚ್ಚಿಗೆ ಬೀರಬಲ್ಲನನ್ನು ಪ್ರೀತಿಸಿರುವುದು ಗೆಳೆತನ ಮಾಡಿರುವುದು ಬಹಳ ಇಷ್ಟವಾಗಿದೆ.

3. ನಿಮ್ಮ ಪರಮ ಮಿತ್ರ ಯಾರು ಏಕೆ?

ನನ್ನ ಪರಮ ಮಿತ್ರ ನನ್ನ ಜೊತೆ ಓದುತ್ತಿರುವ ವಿದ್ಯಾರ್ಥಿ ಅಮಿತ್ ಏಕೆಂದರೆ ಅವನು ಎಲ್ಲರ ಜೊತೆಗೆ ಬಹಳ ಸಹಾಯ ಮಾಡುತ್ತಾನೆ ಮತ್ತು ನಮಗೆ ಓದಿಕೊಳ್ಳಲು ಬರೆದುಕೊಳ್ಳುವಲ್ಲಿ ಸಹಾಯ ಮಾಡುತ್ತಾನೆ.

4. ನಿಮ್ಮ ಮೆಚ್ಚಿನ ಸ್ನೇಹಿತನ ಭಾವಚಿತ್ರವನ್ನು ಅಂಟಿಸಿ ಅವನಲ್ಲಿ ನೀವು ಮೆಚ್ಚಿಕೊಂಡ ಅಂಶಗಳನ್ನು ಬರೆಯಿರಿ.

ನನ್ನ ಸ್ನೇಹಿತನಲ್ಲಿ ಒಳ್ಳೆಯ ಗುಣಗಳು ಎಂದರೆ ಧೈರ್ಯ ವಿಶ್ವಾಸ ಮತ್ತು ಎಂತಹ ಸಮಯದಲ್ಲಿಯೂ ಗೆಳೆಯನನ್ನು ಬಿಟ್ಟುಕೊಡದಿರುವುದು.

### ಚಟುವಟಿಕೆ 7: ಹೀಗೂ ಉಂಟೆ

**ಕೆಳಗಿನ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

> **ದಿನಪತ್ರಿಕೆ: ನಿತ್ಯವಾಣಿ**
>
> **ಎಲ್ಲೆಡೆ ದಾಖಲಾತಿ ಆಂದೋಲನದ ಬಿರುಸು**
>
> ಜೂನ್ 2: ಇಂದು ಕರ್ನಾಟಕದ್ಯಂತ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಬಿರುಸಿನಿಂದ ದಾಖಲಾತಿ ಆಂದೋಲನ ನಡೆಯುತ್ತಿದೆ. ಮಕ್ಕಳೆಲ್ಲರೂ ಉತ್ಸಾಹಕರಾಗಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆಯಲು ಮುಂದಾಗುತ್ತಿದ್ದಾರೆ. ಪೋಷಕರು ಸಹ ಸರ್ಕಾರಿ ಶಾಲೆಯಲ್ಲಿ ತಮ್ಮ ಮಕ್ಕಳನ್ನು ಸೇರಿಸಲು ಕ್ಯೂ ನಿಂತಿರುವುದು ಅಚ್ಚರಿಯ ಸಂಗತಿಯಾಗಿದೆ. ಖಾಸಗಿ ಶಾಲೆಗಳ ವ್ಯಾಮೋಹ ಕಡಿಮೆಯಾಗಿ ಸಾರ್ವಜನಿಕರಲ್ಲಿ ಸರ್ಕಾರಿ ಶಾಲೆಯ ಬಗ್ಗೆ ಉತ್ತಮ ಮನೋಭಾವ ಮೂಡುತ್ತಿರುವುದು ಹೆಮ್ಮೆ ಹಾಗೂ ಅಚ್ಚರಿಯ ವಿಷಯವಾಗಿದೆ. ಇದಕ್ಕೆ ಪೂರಕವಾಗಿ ಇಂದಿನ ಶೈಕ್ಷಣಿಕ ವರ್ಷವನ್ನು 'ಗುಣಾತ್ಮಕ ಶೈಕ್ಷಣಿಕ ವರ್ಷ' ಎಂದು ಸರ್ಕಾರವು ಘೋಷಿಸಿದೆ.

**ಅ. ಕೆಳಗಿನ ಪದಗಳಿಗೆ ಶಿಕ್ಷಕರ ಸಹಾಯದಿಂದ ವಿವರಣೆ ಬರೆಯಿರಿ.**

1. ದಾಖಲಾತಿ ಆಂದೋಲನ

ದಾಖಲಾತಿ ಆಂದೋಲನ ಅಂದರೆ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಒಂದು ಚಳುವಳಿ ಆಗಿದೆ ಇದು ಚಳುವಳಿ ಏಕೆಂದರೆ ಈ ಸಮಯದಲ್ಲಿ ಎಂದರೆ ಜೂನ್ ನಲ್ಲಿ ನಡೆಯುತ್ತದೆ ವಿದ್ಯಾರ್ಥಿಗಳನ್ನು ಒಂದನೇ ತರಗತಿಗೆ ಸೇರಿಸಿಕೊಳ್ಳಲಾಗುತ್ತದೆ.

2. ಸರ್ಕಾರಿ ಹಾಗೂ ಅನುದಾನಿತ ಶಾಲೆಗಳು

ಸರ್ಕಾರಿ ಶಾಲೆ ಎಂದರೆ ಸರ್ಕಾರಿ ಜಾಗ ಸರ್ಕಾರಿ ಕಟ್ಟಡದಲ್ಲಿ ಸರ್ಕಾರಿ ಸಂಬಳದಿಂದ ಶಿಕ್ಷಕರು ಇಲ್ಲಿ ವಿದ್ಯೆಯನ್ನು ಕೊಡುತ್ತಾರೆ. ಅನುದಾನಿತ ಶಾಲೆ ಎಂದರೆ ಖಾಸಗಿ ಜಾಗ ಖಾಸಗಿ ಒಡೆತನದ ಕಟ್ಟಡದಲ್ಲಿ ಸರ್ಕಾರಿ ಸಂಬಳ ಪಡೆಯುತ್ತಿರುವ ಶಿಕ್ಷಕರು ಇಲ್ಲಿ ವಿದ್ಯೆ ಕೊಡುತ್ತಾರೆ.

3. ಖಾಸಗಿ ಶಾಲೆಗಳ ವ್ಯಾಮೋಹ

ಪ್ರತಿಷ್ಠೆ, ಇಂಗ್ಲಿಷ್ ಕಲಿಯುವ ಹಂಬಲ, ಖಾಸಗಿ ಶಾಲೆಗಳಲ್ಲಿ [illegible] [illegible] ಇಂಗ್ಲಿಷ್ ಖಾಸಗಿ ಶಾಲೆಗಳ ಮೇಲೆ ಇರುವ ವ್ಯಾಮೋಹಕ್ಕೆ ಕಾರಣ

4. ಗುಣಾತ್ಮಕ ಶಿಕ್ಷಣ

ಗುಣಾತ್ಮಕ ಶಿಕ್ಷಣ ಎಂದರೆ ಕ್ವಾಲಿಟಿ ಎಜುಕೇಶನ್ ಎಂದರೆ ಶಿಕ್ಷಣ ಪಡೆಯುವುದು ಎಲ್ಲಾ ಮಕ್ಕಳ ಹಕ್ಕಾಗಿದೆ ಆದರೆ ಆ ಶಿಕ್ಷಣದಲ್ಲಿ ಗುಣಾತ್ಮಕತೆ ಎಂದರೆ ಕ್ವಾಲಿಟಿ ಇರಬೇಕು ಅದನ್ನೇ ನಾವು ಗುಣಾತ್ಮಕ ಶಿಕ್ಷಣ ಎನ್ನುತ್ತೇವೆ.

ಆ. ನಿನ್ನ ಶಾಲೆಯಲ್ಲಿ ಆಚರಿಸಿದ 'ಪರಿಸರ ದಿನಾಚರಣೆ' ಕುರಿತು ಒಂದು ಪುಟ್ಟ ವರದಿ ಬರೆಯಿರಿ.

ಪ್ರತಿ ವರ್ಷ ಜೂನ್ 6ನೇ ತಾರೀಕು ಪರಿಸರ ದಿನಾಚರಣೆ ಆಚರಿಸುತ್ತಾರೆ ನಮ್ಮ ಶಾಲೆಯಲ್ಲೂ ಕೂಡ ಪರಿಸರ ದಿನಾಚರಣೆ ದಿವಸ ನಾವು ಬೆಳಗಿನ ಪ್ರಾರ್ಥನೆಯ ಸಮಯದಲ್ಲಿ ನಾವು ಪ್ರತಿಜ್ಞೆ ಕೈಗೊಂಡೆವು ನಾವು ಯಾವುದೇ ಕಾರಣಕ್ಕೂ ಗಿಡಮರಗಳನ್ನು ಕಡಿಯುವುದಿಲ್ಲ ಕಾಡನ್ನು ನಾಶಪಡಿಸುವುದಿಲ್ಲ ಒಂದು ವೇಳೆ ಕಡಿಯಬೇಕಾಗಿ ಬಂದರೆ ಇನ್ನೂ ಎರಡು ಗಿಡ ಮರಗಳನ್ನು ನೆಟ್ಟು ಪೋಷಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದವು ಮತ್ತು ಆ ದಿನ 10 ಗಿಡಗಳನ್ನು ತಂದು ನಮ್ಮ ಶಾಲೆಯ ಆವರಣದಲ್ಲಿ ಮತ್ತು ಈಗಾಗಲೇ ಬೆಳೆಯುತ್ತಿರುವ ಗಿಡಗಳಿಗೆ ನೀರು ಹಾಕಿದೆವು. ಪ್ರತಿಯೊಬ್ಬರೂ ಒಂದೊಂದು ಗಿಡವನ್ನು ದತ್ತು ತೆಗೆದುಕೊಂಡೆವು ಒಂದು ವರ್ಷ ನಾವು ಅದನ್ನು ಪೋಷಿಸುತ್ತೇವೆ ಎಂದು ಪಣತೊಟ್ಟೆವು.

## ಚಟುವಟಿಕೆ 8: ನಾನು ಬರೆದಂತೆ

1. ಕಥೆಯನ್ನು ಓದಿ ಬಿಟ್ಟಿರುವ ಕಥಾಭಾಗವನ್ನು ಪೂರ್ಣಗೊಳಿಸಿ, ಸೂಕ್ತವಾದ ಶೀರ್ಷಿಕೆ ನೀಡಿ.

ಒಂದು ಕಾಡಿನ ದಾರಿಯಲ್ಲಿ ರಾಮಣ್ಣನು ಮರ ಕಡೆಯುತ್ತಿದ್ದನು. ಅದೇ ದಾರಿಯಲ್ಲಿ ಎರಡು ಕರಡಿಗಳು ಬಂದವು. ಅವು ರಾಮಣ್ಣನಿಗೆ ಏನೋ ಕೂಗಿ ಹೇಳುತ್ತಿದ್ದವು. ಆದರೆ ಅವನಿಗೆ ಏನು ತಿಳಿಯಲಿಲ್ಲ. ನಂತರ ಕರಡಿಗಳು ಮರ ಹತ್ತತೊಡಗಿದವು. ಇದನ್ನು ನೋಡಿ ರಾಮಣ್ಣನು ಹೆದರಿದನು. ನಂತರ

ನಂತರ ರಾಮಣ್ಣನೂ ಕೂಡ ಓಡಿ ಹೋಗಿ ಒಂದು ಮರವನ್ನು ಹತ್ತಿ ಏರಿ ಕುಳಿತನು ಅಷ್ಟರಲ್ಲಿ ಒಂದು ಹುಲಿ ಆ ದಾರಿಯಲ್ಲಿ ಬಂದು ಕರಡಿಗಳು ಮತ್ತು ರಾಮಣ್ಣ ಮರಹತ್ತಿ ಏರಿ ಉಳಿತಿರುವುದನ್ನು ನೋಡಿ ಅಲ್ಲೇ ಹೊಂಚು ಹಾಕಿ ಕುಳಿತುಕೊಂಡಿತು ರಾಮಣ್ಣನ ಹತ್ತಿರ ಒಂದು ಬಂದು ಇತ್ತು ಆ ಬಂದೂಕಿನಿಂದ ಅವನು ಜೋರಾಗಿ ಆ ಹುಲಿಯ ಗಾಳಿಯಲ್ಲಿ ಗುಂಡು ಹಾರಿಸಿದನು. ಆಗ ಹುಲಿ ಹೆದರಿ ಓಡಿಹೋಯಿತು, ಇದರಿಂದ ರಾಮಣ್ಣನಿಗೆ ಒದಗಿ ಬಂದ ಅಪಾಯವನ್ನು ಮೊದಲೇ ತಿಳಿಸಿದ ಕರಡಿಗಳಿಗೆ ಅವನು ಕೃತಜ್ಞತೆಯನ್ನು ಸಲ್ಲಿಸಿದನು. ಆದರೆ ಕರಡಿಗಳು ಹುಲಿಯಿಂದ ರಕ್ಷಿಸಿದ ರಾಮಣ್ಣನಿಗೆ

ಖುಷಿಯಾದ ಕರಡಿಗಳು ಹಣ್ಣು ಹಂಪಲು ತಂದು ರಾಮಣ್ಣನಿಗೆ ನೀಡಿದವು.

ಶೀರ್ಷಿಕೆ: ರಾಮಣ್ಣ ಮತ್ತು ಕರಡಿಗಳ ಪರಸ್ಪರ ಸಹಾಯ.

## ಚಟುವಟಿಕೆ 9: ನಾನು ತಿಳಿದಂತೆ

ನೀಡಲಾದ ಪದ್ಯವನ್ನು ಓದಿ ಅರ್ಥೈಸಿಕೊಂಡು ನಿಮ್ಮ ಅಮ್ಮನ ಕುರಿತು ಒಂದು ಪುಟ್ಟ ಪದ್ಯವನ್ನು ಬರೆಯಿರಿ.

### ಅಮ್ಮ

ನಿನ್ನ ನುಡಿಯ ಜೇನಿನಲ್ಲಿ
ಎದೆ ಒಲುಮೆಯ ಸಿರಿಯಲಿ
ಮುದ್ದೆ ಮಾಡಿ ಅನುರಾಗದಿ ನೀಡಿ
ಜೋಗುಳವ ಹಾಡುವೆ ಲಾಲಿಯಲಿ ॥
ಮನೆಗೆ ಮೊದಲ ಪಾಠಶಾಲೆಯಲ್ಲಿ ಗುಟುಕಿಟ್ಟು, ನಭಕೆ ಹಾರಲು ಕಲಿಸಿ
ತಪ್ಪುನೆಪ್ಪುಗಳ ಮರೆತು ಕರುಣೆಯಲಿ
ಊಟೆಯಂದದಿ ನೆಗೆನೆಗೆದು ಬರುವೆ ಅರಸಿ ॥

ಮಹಾತ್ಮನಿರಲಿ ಮಂಕನಿರಲಿ
ಜಗದೊಡೆಯನಾಗಲೆಂದು ಅರಸುವ ಮಾತೆ
ಗುರಿ ಮರೆತ ಬಾಳಿಗೆ= ನೀ ದಿಕ್ಸೂಚಿ
ನೀ ಬರಿ ಅಮ್ಮನಲ್ಲ, ನಡೆದಾಡುವ ದೇವತೆ ॥

ಅಮ್ಮ ಅಮ್ಮ ಅಮ್ಮ
ಈ ಜಗವೇ ನೀನು ಅಮ್ಮ
ನೀನಿಲ್ಲದಿದ್ದರೆ ಈ ಜಗ ಶೂನ್ಯ
ಅಮ್ಮ ನೀನು ವಹಿಸುವ ಕಾಳಜಿ
ಅಮ್ಮ ನೀನು ಕೊಡುವ ಪ್ರೀತಿ
ಅಮ್ಮ ನಿನ್ನ ಪ್ರೀತಿಯ ನುಡಿ
ಅಮ್ಮ ನೀನು ತೋರುವ ವಿಶ್ವಾಸ
ಈ ಜಗತ್ತಿನಲ್ಲಿ ಯಾರೂ ಕೊಡಲಾರರು.
ಅಮ್ಮ ನೀ ನನ್ನ ಬಿಟ್ಟು ಎಲ್ಲಿ ಹೋಗದಿರು.

### ಚಟುವಟಿಕೆ 10: ನನ್ನ ಸಮರ್ಥನೆ

ಅ. ನೀಡಲಾದ ಹೇಳಿಕೆಗಳಿಗೆ ಸಮರ್ಥನೆ ಬರೆಯಿರಿ.

ವೃದ್ಧಾಶ್ರಮದಲ್ಲಿ ಕೇವಲ ಅಡುಗೆ ಮಾಡುವವರು ಇರುತ್ತಾರೆ ವಾರ್ಡನ್ ಇರುತ್ತಾರೆ ಮತ್ತು ತಮ್ಮಂತೆ ಇರುವ ಇತರ ವೃದ್ಧರು ಇರುತ್ತಾರೆ ಅಲ್ಲಿ ವೃದ್ಧರಿಗೆ ಸಮಯ ಹೋಗುವುದಿಲ್ಲ ವೃದ್ಧರು ತಮ್ಮ ತಮ್ಮ ಮನೆಗಳಲ್ಲಿದ್ದರೆ ತಮ್ಮ ಮೊಮ್ಮಕ್ಕಳ ಜೊತೆ ಆಟವಾಡುತ್ತಾರೆ ಆ ಮೊಮ್ಮಕ್ಕಳ ಆಟ ನೋಡಿ ಸಮಯ ಹೋಗುತ್ತದೆ ಅವರಿಗೆ ಇಳಿವಯಸ್ಸಿನಲ್ಲಿ ಸಂತೋಷ ಖುಷಿ ಎಂದರೆ ಮಗ ಮೊಮ್ಮಕ್ಕಳು ಮಗಳು ಅವರ ಜೊತೆಗೆ ಇರುವುದು.

2. ಸಾರ್ವಜನಿಕ ಆಸ್ತಿಯನ್ನು ಹಾಳು ಮಾಡಬಾರದು.

ಸಾರ್ವಜನಿಕ ಆಸ್ತಿ ನಮ್ಮ ಆಸ್ತಿ ಅದನ್ನು ಹಾಳು ಮಾಡಿದರೆ ಮತ್ತೆ ಅದನ್ನು ನಿರ್ಮಿಸುವವರು ನಾವ್ಯಾರು ಅಲ್ಲ ನಮ್ಮ ಹಣದಿಂದಲೇ ಸಾರ್ವಜನಿಕ ಆಸ್ತಿ, ತಯಾರಾಗಿದೆ ಸಾರ್ವಜನಿಕ ಆಸ್ತಿ ನಮ್ಮೆಲ್ಲರ ಆಸ್ತಿ ಅದನ್ನು ಹಾಳು ಬಡವಿದರೆ ಮತ್ತೆ ಅದು ನಿರ್ಮಾಣ ಆಗುವುದು ಬಹಳ ಸಮಯ ಹಿಡಿಯುತ್ತದೆ ಮತ್ತೆ ನಾವು ಜನಪ್ರತಿನಿಧಿಗಳ ಬಳಿ ಅಥವಾ ಪಂಚಾಯಿತಿ ಕಟ್ಟೆ ಅಲೆಯಬೇಕಾಗುತ್ತದೆ.

### ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ವಿವಿಧ ಪಠ್ಯ ಅಥವಾ ಪಠ್ಯೇತರ ವಿಷಯಗಳನ್ನು ಓದಿ ಅರ್ಥಮಾಡಿಕೊಳ್ಳುತ್ತೇನೆ | |
| 2 | ಪಠ್ಯಅಥವಾ ಪಠ್ಯೇತರ ವಿಷಯಗಳಲ್ಲಿ ಪ್ರಮುಖ ಪಾತ್ರಗಳು ಮತ್ತು ಪರಿಕಲ್ಪನೆಗಳನ್ನು ಗುರುತಿಸುತ್ತೇನೆ. | |
| 3 | ಪಠ್ಯ ಅಥವಾ ಪಠ್ಯೇತರ ವಿಷಯಗಳಲ್ಲಿ ಪ್ರಮುಖ ಪಾತ್ರಗಳು ಮತ್ತು ಪರಿಕಲ್ಪನೆಗಳನ್ನು ಗುರುತಿಸುವುದರ ಜೊತೆಗೆ ಅದರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುತ್ತೇನೆ. | |
| 4 | ಪಠ್ಯ ಅಥವಾ ಪಠ್ಯೇತರ ವಿಷಯಗಳಲ್ಲಿ ಪ್ರಮುಖ ಪಾತ್ರಗಳು ಮತ್ತು ಪರಿಕಲ್ಪನೆ ಹಾಗೂ ಆಲೋಚನೆಗಳನ್ನು ಅರ್ಥಮಾಡಿಕೊಂಡು ಆ ಘಟನೆಯನ್ನು ಅನುಕ್ರಮವಾಗಿ ವಿವರಿಸುತ್ತೇನೆ. | |

**ಶಿಕ್ಷಕರ ಹಿಮ್ಮಾಹಿತಿ**

ದಿನಾಂಕ:

ಶಿಕ್ಷಕರ ಸಹಿ